Regd No B G 182

September 1969 ಸೆಪ್ಟಂಬರ್

ಗೋ ಮಾತಾಕೀ ಜೈ

ಭಾರತದ ಆದ್ಯಂತ ಗೋವಧೆಯು
ಶಾಸನಬದ್ಧವಾಗಿ
ನಿರೋಧವಾಗಲಿ

Cow Slaughter should be banned immediately

# ಗೋರಕ್ಷಣಿ
# GORAKSHANA

Please help in every way
This Humanitarian
Propaganda Paper

★

ಗೋರಕ್ಷಣ್ಯ, ಅಹಿಂಸಾ
ಪತ್ರಿಕೆ

ವಿನಂತಿ– ಸಕಲರೀತಿಯಲ್ಲೂ ನೆರವನ್ನು ಈಡಿ

20 ನೇ ವರ್ಷ

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಬಿಡಿ ಪ್ರತಿ 2 ಪೈಸೆ

## Cow Slaughter should be banned Immediately

## ಗಾಂಧಿ ಶತಾಬ್ದಿಯ ಈ ಸಂದರ್ಭದಲ್ಲಿ ಗೋವಧೆ ನಿಶೇಧವಾಗಲಿ

## Cow Protection

His Holines the great Swami Chinmayanandji with an international repute has stated that the Western Countries consider he protection of cows purely from a profit motive, i. e. they are only interested in the milk and meat of the cows, but the Indian stand for the protection of cows is mainly due to the sanctity of the cows, for she cooperates with the teeming millions of India in the agricultural field in the form of the bulls. Swamiji said that the protection of cows and bulls should be taken up as a national programme and must be given priority in the economical planning of the country

★

Sri B S Shikavat a prominent Jan Sangh personality has stated that Dharma and cow had unbreakable ties with each other. In India in the past, they are so in the present times and shall remain so in the future. The preservation of cows has a very great religious and spiritual significance to the Indians and as such, the present government must care for the religious sentiments of about 50 crores of Hindu people

★

Dr Mahomed Shaf Khan has emphatically stated that no Muslim is in favour of cow slaughter but the Congress Government like the British Government in India exploits one comunity against another under the cloak that the Muslims are against cow protection

### "ಸತ್ಯವಾದಿ" ಯ ಸ್ವರ್ಣೋತ್ಸವ

ಮೈಸೂರು— 28-9-69 ಭಾನುವಾರ 'ಸತ್ಯವಾದಿ" ಯ ಸ್ವರ್ಣ ಮಹೋತ್ಸವವು ಎಂ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ನಾಗಪ್ಪ ಆಳ್ವರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು.

★

ಗಾಂಧೀಜೀ ಅಮೃತವಾಣಿ

ಅಹಿಂಸೆ ನನ್ನ ದೇವರು,
ಸತ್ಯ ನನ್ನ ದೇವರು.

## Message

I am glad that 'Gorakshana' a monthly magazine has completed its 20 years of useful service In the scheme of things cow protection is the task of the State and private agencies. I am happy that the Magazine is propogating these values on right lines.

I wish the Journal success.

**Veerendra Patil**
Chief Minister
Government of Mysore

ಭಗವಂತನ ಕೃಪೆಯಿಂದ
'ಗೋರಕ್ಷಣ" ಕ್ಕೆ
ಇಪ್ಪತ್ತನೇ ವರ್ಷ
ಪ್ರಾರಂಭವಾಗುತ್ತಿದೆ.

### ಬ್ರಾಹ್ಮಣರ ಲಕ್ಷಣ

(ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು)

★

'ಬ್ರಹ್ಮಜ್ಞಾನೀ ಹಿ ಬ್ರಾಹ್ಮಣಃ" ಎಂಬುದು 'ಬ್ರಾಹ್ಮಣರ ಲಕ್ಷಣವನ್ನು ವಿಶೇಷವಾಗಿ ಹೇಳುತ್ತದೆ. ಆದರೆ, ಕೇವಲ ಬ್ರಹ್ಮನ – ವೇದಗಳ ತಿಳುವು ಮಾತ್ರವಲ್ಲ, ಅಂತಹ ತರದ ಆಚರಣೆಯೂ ಅತನಲ್ಲಿರಬೇಕಾದುದೆ ಇಲ್ಲಿ ಮುಖ್ಯಾರ್ಥವಾಗಿದೆ. ಈ ಬಗೆತಕ್ಕೆ ಪ್ರಾಚೀನ ಕೃತಿಯಲ್ಲಿ ಒಂದು ಸೂಕ್ತಿಯಿದೆ ( ಅಶ್ವಮೇಧ ಪರ್ವದ ವೈಷ್ಣವಧರ್ಮಪರ್ವ 2 - 81 ) ಯೇ ಕ್ಷೀಣತಿದಾತಾಃ ಶ್ರುತಿಪೂರ್ಣಕರ್ಣಾಃ ಜಿತೇಂದ್ರಿಯಾಃ ಪ್ರಾಣಿವಧೇ ನಿವೃತ್ತಾಃ | ಪ್ರತಿಗ್ರಹೇ ಸಂಕುಚಿತಾಃ ಗೃಹಸ್ಥಾಃ ತೇ ಬ್ರಾಹ್ಮಣಾಃ ತಾರಯಿತುಂ ಸಮರ್ಥಾಃ " ಇಲ್ಲಿ ಪ್ರಕೃತೋಚಿತವಾದ ವಿಶೇಷಣವೊಂದು ಗಮನೀಯವದೆ ; 'ಪ್ರಾಣಿವಧೇ ನಿವೃತ್ತಾಃ ' ಎಂಬುದು ಬ್ರಾಹ್ಮಣ್ಯದಲ್ಲಿ ಭೂತದಯಾಪರತ್ವದ ಮೇಲ್ಪಂಕ್ತಿಯನ್ನು ಸಾರುತ್ತದೆ. ಬ್ರಾಹ್ಮಣ ವಂಶದಲ್ಲಿ ಹುಟ್ಟುವುದಾಗಲೀ, ವೇದಾಧ್ಯಯನವಾಗಲೀ, ಆಡಂಬರದ ಜೀವನವಾಗಲೀ ಇಲ್ಲಿ ಎತ್ತಿ ಹೇಳಿಲ್ಲ ! ಪರಂತು, " ತನ್ನಂತೆ ಪರರು ' " ಆತ್ಮವತ್ ಸರ್ವಭೂತಾನಿ " ಎಂಬ ಸಾರ್ವಜನೀನ ಸೂಕ್ತಿಯನ್ನು ಇಲ್ಲಿ ಅನುವದಿಸಿದಂತಿದೆ ! ಕೇವಲ ಜಿಹ್ವಾ ಚಾಪಲ್ಯಕ್ಕಾಗಿ, ದೇಹದ ಸ್ಥೂಲತೆಯ ಪ್ರಾಪ್ತಿಗಾಗಿ ಪ್ರಾಣಿವಧಾ ನಿರತರಾದರೆ ನಾವೇನು ಮಾಡಿದಂತಾಗುತ್ತದೆ? ನಮ್ಮಲ್ಲಿ ಸಬಲರು ನಿರ್ಬಲರನ್ನು ವಧಿಸುವುದು ಅದೆಷ್ಟು ಅನ್ಯಾಯ - ಅಧರ್ಮವೋ, ಅಷ್ಟೇ ಪ್ರಾಣಿವಧೆಯೂ ಅನ್ಯಾಯ-ಅಧರ್ಮವೆಂಬುದನ್ನು ಮನಗಾಣಬೇಕು ! " ಸರ್ವತ್ರ ಸಮದರ್ಶನಃ " ಆಗಬೇಕು !

○

### ದನಗಳಿಗೆ ಒಳ್ಳೇ ಮೇವು

ಭತ್ತದ ಹೊಟ್ಟಿನಿಂದ ಎಣ್ಣೆ ತೆಗೆಯುವ ಕೈಗಾರಿಕೆಯಲ್ಲಿ ಉಪಪದಾರ್ಥವಾಗಿ ಬಂದ ಎಣ್ಣೆ ತೆಗೆದ ಹೊಟ್ಟು ಜಿಳಿಯುವ ಮತ್ತು ಹಾಲು ಕೊಡುವ ದನಗಳಿಗೆ ಒಳ್ಳೆಯ ಮೇವು.

★

ಕಾರ್ಲ್ ಹೆಗ್ಗ ಬೆಕ್ ಮೃಗ ಪಕ್ಷಿ ಶಾಲಾ

( ಮುಂದುವರಿದುದು )

ಫ್ರಾಂಕ್‌ಫರ್ಟ್, ಕೋಪನ್‌ಹೇಗನ್, ಲಂ ಡನ್, ಪ್ಯಾರಿಸ್, ಆಮಸ್ಟರ್‌ಡ್ಯಾಂ, ನ್ಯೂ ಯಾರ್ಕ್ ಮುಂತಾದ ನಗರಗಳ ಮೃಗ ಪಕ್ಷಿಗಳ ಸಂಘಗಳೆಲ್ಲಾ ಇವರ ದಕ್ಷ ಆಡ ಳಿತವನ್ನು ಪ್ರಶಂಸಿಸಿವೆ. ಡೋಂ ನಗರಗ ದ ಪ್ರಾಣಿಸಂಗ್ರಹಾಲಯವನ್ನು ಸುವ್ಯವ ಸ್ಥಿತ ಗೊಳಿಸಲು ಹೆಗ್ಗಬೆಕ್ ತಮ್ಮ ಪು ತ್ರನೊಂದಿಗೆ ವಿಶೇಷ ಆಹ್ವಾನದ ಮೇ ಲೆ ಹೋಗಿದ್ದರು. ಚಿಕಾಗೋ, ಸೆಂಟ್ ಲೂ ಯಿ ಮುಂತಾದ ನಗರಗಳಲ್ಲಿ ನಡೆದ ವಿಶ್ವ ದ ಪ್ರಾಣಿ ಸಮ್ಮೇಳನದಲ್ಲಿ ಇವರು ಸಾವಿರ ಕ್ಕೂ ಹೆಚ್ಚಿನ ಪ್ರಾಣಿಗಳನ್ನು ಕಮಹಿಸಿ ದ್ದರು.

ಕಳೆದ ಮಹಾಯುದ್ಧಕಾಲದಲ್ಲಿ ನಡೆದ ಬಾಂಬುಧಾಳಿಯಿಂದ ಕೇವಲ ಕೆಲವೇ ನಿ ಮಿಷಗಳಲ್ಲಿ ಇವರ ಪ್ರಾಣಿಸಂಗ್ರಹಣೆಯ ಶೇಕಡ 80 ಭಾಗ ನಾಶವಾಗಿ ಹೋಯಿತು. 1948 ರಲ್ಲಿ ಹೇಗ್ಗಬೆಕ್ ಕುಟುಂಬದ ಶತ ಮಾನೋತ್ಸವವು ನಡೆದಾಗ, ವಿಶ್ವದ ಅನೇ ಕ ಭಾಗಗಳಿಂದ ಮತ್ತೆ ಪ್ರಾಣಿಗಳನ್ನು ಕ ರೆತರಲಾಯಿತು. ಕ್ರಿ ಶ 1956 ಮೊದ ಲ್ಗೊಂಡು ವಿಶ್ವದ ನಾನಾ ಭಾಗಗಳಲ್ಲಿರುವ ಇವರ ಪ್ರತಿನಿಧಿಗಳು ಹೊಸಹೊಸ ಪ್ರಾಣಿ ಗಳನ್ನು ಹ್ಯಾಂಬರ್ಗಿಗೆ ಕಳುಹಿಸುತ್ತಲೇ ಇದ್ದಾರೆ. ಇಲ್ಲಿ 1956 ರಲ್ಲಿ ತೆರೆಯಲ್ಪ ಟ್ಟ ಪಕ್ಷಿ ವಿಭಾಗವು ವಿಶ್ವದ ಎಲ್ಲಾ ದೇಶ ದವರಿಂದಲೂ ಮನ್ನಣೆ ಪಡೆದಿದೆ. ನವ ದೆಹಲಿಯಲ್ಲಿ ಒಂದು ನೂತನ ಮೃಗಶಾಲೆ ಯನ್ನು ತೆರೆಯುವ ಯೋಚನೆಯನ್ನು ಭಾ ರತ ಸರಕಾರವು ಹೊಂದಿದ್ದು, ಅದಕ್ಕಾಗಿ ಹೇಗ್ಗ ಬೆಕ್‌ರನ್ನು ಸಲಹೆಗಾರರಾಗಿರಲು ಕೋರಲಾಗಿದೆ.

ಹ್ಯಾಂಬರ್ಗಿನ ಮೃಗಪಕ್ಷಿಶಾಲೆಗೆ ಸಮ ನಾದದ್ದು ಜಗತ್ತಿನಲ್ಲಿ ಬೇರೆಲ್ಲಿಯೂ ಇಲ್ಲ. ಇದರ ಸ್ಥಾಪಕರು ಈಗಿಲ್ಲದಿದ್ದರೂ ಇವರ ಮೊಮ್ಮಕ್ಕಳು ಸಹಾ ಅಜ್ಜೀ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದಾರೆ. ಇಲ್ಲಿನ ಪ್ರಾಣಿ ಗಳಿಗಾಗಿ ಪ್ರತಿ ವರ್ಷವೂ 170000 ಕಿ ಲೋ ಧಾನ್ಯಗಳೂ, 30000 ಕಿ ಲೋ ಆಲೂಗಡ್ಡೆ, 250000 ಕಿಲೋ ತರಕಾರಿ ಗಳೂ, 75000 ಕಿಲೋ ಮೀನುಗಳೂ, 200000 ಕಿಲೋ ಹುಲ್ಲೂ, ಜಿಲ್ಲ ದೆ ಮಾಂಸವೂ ಬೇಕಾಗಿದೆ. ಇವಿಷ್ಟನ್ನೂ ಹೇಗನ್ ಬೆಕ್ ಕುಟುಂಬದವರೇ ಒದಗಿ ಸುತ್ತಿದ್ದಾರೆ. "ವಿಶ್ವದಲ್ಲಿ ನಾವು ಬೇ ರೆಲ್ಲೂ ಇಂತಹ ಸುಂದರ ಮೃಗಶಾಲೆಯ ನ್ನು ನೋಡಲು ಸಾಧ್ಯವೇ ಇಲ್ಲ" ಎಂದು ಈಚೆಗೆ ಅಮೇರಿಕ ಪತ್ರಿಕೆಯೊಂದು ಉ ದ್ಗಾರ ತೆಗೆದಿರುವುದು ಆಶ್ಚರ್ಯವೇನಲ್ಲ.

( ಯೂ ಪಿ ಎಸ್ )

ಜಾನುವಾರುಗಳ ಅಭಿವೃದ್ಧಿ

ಜಾನುವಾರುಗಳು ಮಾನವ ಜನಾಂಗ ಕ್ಕೊಂದು ವರ. ಶಾಸ್ತ್ರಗಳಲ್ಲಿ ದನವನ್ನು ಕಾಮಧೇನು ಎಂದು ಕರೆಯುವದರಲ್ಲಿ ಏ ನೂ ಆಶ್ಚರ್ಯವಿಲ್ಲ. ಹಾಲಿಗಿಂತ ಪೌ ಷಕ ಆಹಾರ ಇನ್ನೊಂದಿದೆಯೇ? ನಮ್ಮ ಹೊಲಗಳಿಗೆ ಗೊಬ್ಬರ ಜಾನುವಾರುಗಳಿಂ ದ ದೊರೆಯಬೇಕು. ಹಾಲು ಮತ್ತು ಹಾ ಲಿನ ಪದಾರ್ಥಗಳನ್ನು ಮಾರಿ ಎಷ್ಟೊಂದು ಜನ ಉಪಜೀವನ ನಡೆಸುತ್ತಿಲ್ಲ? ಅಂದ ಮೇಲೆ ಜಾನುವಾರುಗಳು ನಮ್ಮ ಸಂಪತ್ತು ಅವುಗಳ ಅಭಿವೃದ್ಧಿ ನಮ್ಮ ಅಭಿವೃದ್ಧಿಗೆ ಮೂಲ.

ನಮ್ಮ ದೇಶದಲ್ಲಿ 1961 ನೇ ಜಾನು ವಾರು ಗಣತಿಯ ಪ್ರಕಾರ 17.5 ಕೋಟಿ ದನಕರುಗಳೂ, 5.1 ಕೋಟಿ ಎಮ್ಮೆಗಳೂ ಇದ್ದವು : ಅಂದರೆ ಪ್ರಪಂಚದ ಒಟ್ಟು ಜಾ ನುವಾರುಗಳಲ್ಲಿ ಶೇಕಡ 20 ಅಂಶದ ದನ ಕರುಗಳು ಮತ್ತು ಶೇಕಡ 54 ಅಂಶ ಎ ಗಳು ನಮ್ಮಲ್ಲಿ ಇವೆ ಎಂದಾಯಿತು. ಒ ಟ್ಟಿಗೆ ಸೇರಿಸಿದರೆ, ಪ್ರಪಂಚದ ಪ್ರತೀ ನೂ ರು ಜಾನುವಾರುಗಳಲ್ಲಿ 23 ನಮ್ಮಲ್ಲಿವೆ ಎನ್ನಬಹುದು ನಮ್ಮ ರಾಷ್ಟ್ರೀಯ ವರ ಮಾನದಲ್ಲಿ ಇಷ್ಟೊಂದು ಜಾನುವಾರುಗಳ ಪಾಲು ತುಂಬಾ ಅಧಿಕವಾಗಿರಬೇಕಾದುದು ನಿಜ. ಆದರೆ ದುರ್ದೈವದ ಸಂಗತಿಯೆಂದ ರೆ ಅದು ಬರೀ ಶೇಕಡ 7 ಅಥವಾ 8 ಅಂಶ ಮಾತ್ರ.

ಜಾನುವಾರುಗಳ ಉತ್ಪನ್ನ ನಿಕೃಷ್ಟವಾ ಗಿರಲು ಏನು ಕಾರಣ? ಬಹಳ ಕಾಲ ದಿಂದ ನಾವು ಜಾನುವಾರುಗಳ ಕಡೆಗೆ ಹೆ ಚ್ಚಿನ ಗಮನ ಕೊಟ್ಟಿಲ್ಲ. ಬೇರೆ ದೇಶಗ ಳೊಡನೆ ಹೋಲಿಸ್ನೋಡೋಣ. ಜಪಾ ನಿನಲ್ಲಿ ಒಂದು ದದ ವರ್ಷಕ್ಕೆ 4350 ಕೆಲೊ ಗ್ರಾಂ ಉತ್ಪನ್ನ ನೀಡುವುದು. ನಮ್ಮಲ್ಲಿ ದನದ ಸರಾಸರಿ ವಾರ್ಷಿಕ ಉತ್ಪನ 173 ಕಿಲೋಗ್ರಾಂ; ಎಮ್ಮೆಯ ಉತ್ಪನ್ನ 491 ಕಿಲೋಗ್ರಾಂ, ಪ್ರಪಂಚದ ಒಟ್ಟು ಜಾನು ವಾರುಗಳಲ್ಲಿ ಶೇ. 23 ಅಂಶ ನಮ್ಮಲ್ಲಿದ್ದ ರೂ ಕೂಡ ಹಾಲಿನ ಉತ್ಪತ್ತಿ ಬರೀ ಶೇಕ ಡ 6.56 ಅಂಶ ಮಾತ್ರ. ಹೀಗಾಗಿ ನಮ್ಮಲ್ಲಿ ಹಾಲಿನ ಸೇವನೆಯು ಪ್ರಮಾಣ ತೀರಾ ಅಲ್ಪ– ದಿನಕ್ಕೆ ಸರಾಸರಿ 126 ಗ್ರಾಂ ಮಾತ್ರ. ಜಾನುವಾರುಗಳ ಅಭಿ ವೃದ್ಧಿ ದೇಶದ ಸಂಪತ್ತಿನ ಅಭಿವೃದ್ಧಿ. ಇದು ಅತ್ಯಂತ ಲಾಭಪ್ರದವೂ ಹೌದು.

ನಮ್ಮ ದೇಶದಲ್ಲಿ ಇಪ್ಪತ್ತಾರು ಬಗೆಯ ದನಗಳೂ, ಎಂಟು ಬಗೆಯ ಎಮ್ಮೆಗಳೂ ಇವೆ.

ಭಾರತದ ಜಾನುವಾರುಗಳು ಗಟ್ಟಿಮು ಟ್ಟಾದವುಗಳೆಂದು ಪ್ರಸಿದ್ಧಿ ಪಡೆದಿವೆ. ಇವು ವಿಶೇಷಗಳಲ್ಲಿ ಜನಪ್ರಿಯವಾಗಿವೆ. ವಿಶೇ ಷಗಳಿಗೆ ನಮ್ಮ ಜಾನುವಾರುಗಳು ತುಂಬಾ ರಫ್ತಾಗಿವೆ.


ವುಡ್‌ಲಾಂಡ್ಸ್ ಜಯಪ್ರದ 3ನೇ ವಾರ

— ಅತ್ಯಾಕರ್ಷಣೀಯ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಸಾ ಜ ನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ ್ಷ್ಮೀಕಾಂತ ಪ್ಯಾರೇಲಾಲ್

[ ದಿನ 3 ಪ್ರದರ್ಶನಗಳು ]

ಆಪೆದಾ— ಈ ದಿವಸ

.... ಚಿತ್ತಾಕರ್ಷ ಹಿಂದಿ ಚಿತ್ರ ....

ಮಾಧವಿ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿನಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore


Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapura, Mysore